ಕೂಗನ್ನು ಮಳೆಯ ಹನಿಹನಿಗೂ ಚೆಲ್ಲಿದರು. ಕತೆಗಾರ ಕೈಗಳನ್ನು ರೆಕ್ಕೆ ಮಾಡಿಕೊಂಡು ಬದುವಿನ ಮೇಲೆ ಅವರತ್ತ ಓಡಿದ. ಆ ತುಂಟರ ಗುಂಪಿನ ತುಂಟನೊಬ್ಬ ಹಿಡಿದು ಬೊಗಸೆಯಲ್ಲಿ ಮುಚ್ಚಿಟ್ಟುಕೊಂಡಿದ್ದ ಏಡಿಯನ್ನು ಕತೆಗಾರನ ಮೇಲೆಸೆದ. ಅವನು ಬೆಚ್ಚಿ ಬಿದ್ದು ಆಯಾ ತಪ್ಪಿ ಗದ್ದೆಗೆ ಬಿದ್ದ. ಹುಡುಗರು ಹೋ‌ಓ ಎಂದು ಕೇಕೆಯಿಟ್ಟರು. ಅವನು ಬಿದ್ದ ರಭಸಕ್ಕೆ ಕೆಸರು ನೀರು ಹುಡುಗರ ಮುಖದ ಮೇಲೆ ನಕ್ಕಿತು. ಮಳೆ ಸುರಿಯುತ್ತಿತ್ತು.

ನೀವೀಗ ಎಲ್ಲಿದ್ದೀರಿ ಎಂದು ಕತೆಗಾರ ಕೇಳಿದ. ಹುಡುಗರು ಮಳೆಯಲ್ಲಿ ಎಂದರು. ಅಲ್ಲ ಮಳೆಯ ತೋಟದಲ್ಲಿ ಎಂದ. ಹುಡುಗರು ನೀನಿಲ್ಲವೊ ಎಂದರು. ನಾವಿದ್ದೇವೆ ಎಂದ. ಅವನಿಗೆ ಶ್ರುತಿ ಬಿಡದೆ ಸುರಿಯುತ್ತಿದ್ದ ಮಳೆಯಲ್ಲಿ ಮಳೆಯ ಹಾಡು ಹಾಡಬೇಕೆನಿಸಿತು. ಹುಡುಗರಿಗೆ ಹೇಳಿಕೊಡುತ್ತ ಹಾಡಿದ.

*ಮಳೆ ತೋಟದಲ್ಲಿ*
*ಹನಿ ಹನಿಯು ಹುವ್ವು*
*ನೀರಿನ ಹುವ್ವು*
*ತಂಪದರ ಕಂಪು*
*ಬಾಳಿಗೆ ಇಂಪು*

ಕಾಲುವೆಯಲ್ಲಿ ನೀರು ಹರಿದು ಕೆರೆಗೆ ಬರುತ್ತಿತ್ತು. ಕತೆಗಾರ ಹುಡುಗರನ್ನು ಕಾಲುವೆಯತ್ತ ಓಡಿಸಿದ. ನೀರಿನೊಂದಿಗೆ ಕಾಲುವೆಯಲ್ಲಿ ಹರಿಯುವುದು ಸಾಧ್ಯವೇ ಎಂದ. ಹುಡುಗರು ಅಷ್ಟೇ ಸಾಕೆಂಬಂತೆ ಹರಿವ ನೀರಿನಲ್ಲಿ ಮಲಗಿದರು. ಉರುಳುತ್ತ, ಹೊರಳುತ್ತ ನೀರಿನಂತೆಯೇ ನೀರಿನೊಂದಿಗೆ ಹರಿಯತೊಡಗಿದರು.

ನೋಡುತ್ತಿದ್ದ ಕತೆಗಾರ. ಮಳೆ, ನೀರು, ಕರೆ, ಬೆಳೆ, ಮಕ್ಕಳು. ಇಲ್ಲಿ, ಇದೊಂದು ಸಂತಸದ ತಂಪಿನ ಸಮಾಜ. ಇದು ವಿಸ್ತರಿಸಿ ಬೆಳೆದರೆ... ಎದೆಯಲ್ಲಿ ಕನಸು ಕಾಣತೊಡಗಿತು.

ಕತೆಗಾರ ಮನೆಗೆ ಬಂದ. ಮಳೆ ಸುರಿಯುತ್ತಿತ್ತು. ಕೆರೆಯಲ್ಲಿ ಮರೆತು ಬಂದ ಕೊಡೆಯ ನೆನಪಾಯಿತು.

ಮಳೆ ಥಟ್ಟನೆ ನಿಂತು ಹೋಯಿತು.


**ಸ. ರಘುನಾಥ**

ಹುಟ್ಟೂರು ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಮಲಿಯಪ್ಪನಹಳ್ಳಿ. ಪ್ರಾಥಮಿಕ ಶಾಲಾ ಶಿಕ್ಷಕರಾಗಿ ನಿವೃತ್ತರು. ಪ್ರಸ್ತುತ ಶ್ರೀನಿವಾಸಪುರದಲ್ಲಿ ವಾಸ. ಮೂರು ಕಥಾಸಂಕಲನಗಳು, ಏಳು ಕವನ ಸಂಕಲನಗಳು, ನಾಲ್ಕು ವಿಮರ್ಶಾ ಲೇಖನಗಳ ಸಂಕಲನ, ನಾಲ್ಕು ಅಂಕಣ ಬರಹಗಳ ಸಂಕಲನ ಸೇರಿದಂತೆ ಒಟ್ಟು 28 ಕೃತಿಗಳನ್ನು ಪ್ರಕಟಿಸಿದ್ದಾರೆ. ತೆಲುಗಿನಿಂದ ಕನ್ನಡಕ್ಕೆ, ಕನ್ನಡದಿಂದ ತೆಲುಗಿಗೆ 25 ಕೃತಿಗಳನ್ನು ಅನುವಾದ ಮಾಡಿದ್ದಾರೆ. 'ನಮ್ಮ ಮಕ್ಕಳು' ಎಂಬ ಸಂಸ್ಥೆಯನ್ನು ಸ್ಥಾಪಿಸಿ ಭಿಕ್ಷುಕ ಮಕ್ಕಳು ಬದುಕು ಕಟ್ಟಿಕೊಳ್ಳಲು ನೆರವಾಗುತ್ತಿದ್ದಾರೆ.